

بسم الله الرّحمٰن الرّحيم

# ನಂಬಿಕೆಯ ಅಂಶಗಳು ಮತ್ತು ಆರಾಧನೆಯ ಗುಣಮಟ್ಟ

(ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಅಮೆರಿಕದ ಮೇರಿಲ್ಯಾಂಡ್‌ನ, **'ಮಸ್ಜಿದ್ ಬೈತುರ್ ರಹ್‌ಮಾನ್'** ನಿಂದ **14–10–2022** ರಂದು ನೀಡಿದ **ಜುಮುಅ ಖುತ್‌ಬದ ಸಾರಾಂಶ**)

*(ತಶಹ್ಹುದ್, ತಅವ್ವುಧ್ ಮತ್ತು ಸೂರತುಲ್ ಫಾತಿಹ ಪಠಿಸಿದ ನಂತರ ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್ ಅಯ್ಯದಹುಲ್ಲಾಹು ತಆಲಾ ಬಿನಸ್‌ರಿಹಿಲ್ ಅಝೀಝ್ ಹೀಗೆ ಹೇಳಿದರು:*

ಅಲ್ಲಾಹನು ನಮಗೆ ಹಝ್ರತ್ ಪೈಗಂಬರ್(ಸ)ರ ಸತ್ಯಪ್ರೇಮಿಯಾದ ಹಝ್ರತ್ ಮಸೀಹ್ ಮೌಊದ್(ಅ)ರನ್ನು ನಂಬಲು ಸೌಭಾಗ್ಯ ನೀಡಿರುವನು ಎಂಬುದು ಅವನು ನಮ್ಮ ಮೇಲೆ ಮಾಡಿರುವ ಅತಿದೊಡ್ಡ ಔದಾರ್ಯವಾಗಿದೆ. ಈ ಔದಾರ್ಯಕ್ಕಾಗಿ ನಿಜವಾದ ಕೃತಜ್ಞತೆ ಏನೆಂದರೆ, ನಾವು ಅಲ್ಲಾಹನ ಆಜ್ಞೆಗಳ ಪ್ರಕಾರ ನಡೆಯುವುದು, ಅಲ್ಲಾಹನಿಗೆ ಸಲ್ಲಬೇಕಾದ ಮತ್ತು ಅವನ ಸೃಷ್ಟಿಗಳಿಗೆ ಸಲ್ಲಬೇಕಾದ ಹಕ್ಕುಗಳನ್ನು ಸಲ್ಲಿಸುವುದರಲ್ಲಿ ನಿರತರಾಗುವುದು ಆಗಿದೆ. ನಾವು ಹಝ್ರತ್ ಮಸೀಹ್ ಮೌಊದ್(ಅ)ರೊಂದಿಗೆ ಮಾಡಿದ ಬೈಅತ್ತಿನ ಹಕ್ಕುಗಳನ್ನು ಈಡೇರಿಸುವಾಗಲೇ ಇದು ಸಾಧ್ಯ. ನಾವು ಯಥಾರ್ಥ ಮುಸ್ಲಿಮರಾಗಲಿಕ್ಕಾಗಿ ಹಝ್ರತ್ ಮಸೀಹ್ ಮೌಊದ್(ಅ)ರ ಕಡೆಗೆ ನೋಡಬೇಕಾಗುವುದು. ಅವರು ಹೇಳಿದ ರೀತಿಯ ಪ್ರಕಾರ ನಮ್ಮ ಜೀವಿತವನ್ನು ಕ್ರಮಪಡಿಸಬೇಕಾಗುವುದು.

ತನ್ನ ಮೇಲೆ ಪರಿಪೂರ್ಣವಾದ ವಿಶ್ವಾಸ ಮತ್ತು ನಂಬಿಕೆ ಹೊಂದಲು ಉಪದೇಶಿಸುತ್ತಾ ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ: ನಂಬಿಕೆ ಕೈಗೊಂಡ ವ್ಯಕ್ತಿಯು ತನ್ನ ನಂಬಿಕೆಯನ್ನು ದೃಢವಿಶ್ವಾಸ ಮತ್ತು ದೃಢಜ್ಞಾನದ ಮಟ್ಟಕ್ಕೆ ಏರಿಸಬೇಕಾಗಿದೆ. ಅನಂತರ ಸಂಶಯಕ್ಕೆ ಸಿಲುಕುವುದಲ್ಲ. ಈಗ ನೀವು ಸ್ವತಃ ಆಲೋಚಿಸಿರಿ ಮತ್ತು ತೀರ್ಮಾನವನ್ನು ಮಾಡಿರಿ. ನನ್ನ ಕೈಯಲ್ಲಿ ಬೈಅತ್ ಮಾಡಿಕೊಂಡು ನನ್ನನ್ನು ಮಸೀಹ್ ಮೌಊದ್ ಹಾಗೂ ನ್ಯಾಯಯುತ ತೀರ್ಪುಗಾರನೆಂದು ನಂಬಿದ ನಂತರ ನನ್ನ ಯಾವುದಾದರೂ ತೀರ್ಪು ಅಥವಾ ಕೃತ್ಯದ ಬಗ್ಗೆ ನಿಮ್ಮ ಹೃದಯದಲ್ಲಿ ಏನಾದರೂ ಸಂಶಯ ಅಥವಾ ದುಃಖ ಉಂಟಾಗುವುದಾದರೆ, ನಿಮ್ಮ ವಿಶ್ವಾಸದ ಬಗ್ಗೆ ಚಿಂತಿಸಬೇಕಾಗಿದೆ. ಯಾವನು ನನ್ನನ್ನು ನಂಬಿದ ನಂತರವೂ ಮನಸ್ಸಿನಲ್ಲಿ ಆಕ್ಷೇಪ ಇರಿಸುತ್ತಾನೋ ಆತನು ಇನ್ನಷ್ಟು ಭಾಗ್ಯಹೀನ. ಏಕೆಂದರೆ ಆತನು ನೋಡಿದ ನಂತರವೂ ಕುರುಡನಾದನು.

ಹಝ್ರತ್ ಮಸೀಹ್ ಮೌಊದ್(ಅ) ಮತ್ತು ಅದಕ್ಕಿಂತ ಮುಂಚಿತವಾಗಿ ಹಝ್ರತ್ ಪೈಗಂಬರ್(ಸ) ಮಹ್‌ದಿ ಮಸೀಹ್‌ರ ನಂತರ ಖಿಲಾಫತ್ ವ್ಯವಸ್ಥೆ ಇರುವುದೆಂದು ಸುವಾರ್ತೆ ನೀಡಿದ್ದರು. ಅಹ್ಮದಿಯಾ ಖಿಲಾಫತ್ ಎಂಬುದು ಹಝ್ರತ್ ಮಸೀಹ್ ಮೌಊದ್(ಅ)ರ ಮಾರ್ಗವನ್ನೇ ಜಾರಿಯಲ್ಲಿರಿಸುವ ವ್ಯವಸ್ಥೆಯಾಗಿದೆ. ಪ್ರತಿಯೊಬ್ಬ ಅಹ್ಮದಿಯು ತನ್ನ ಪ್ರತಿಜ್ಞೆಯಲ್ಲಿ ಖಿಲಾಫತಿನೊಂದಿಗೆ ಹೊಂದಿಕೊಂಡಿರುವುದಾಗಿ ಮತ್ತು ಅನುಸರಣೆ ಮಾಡುವುದಾಗಿ ಪ್ರತಿಜ್ಞೆ ಮಾಡುತ್ತಾನೆ. ಆದ್ದರಿಂದ ಖಿಲಾಫತಿನೊಂದಿಗೆ ಸಂಬಂಧ ಇರಿಸುವುದರ ಪ್ರತಿಜ್ಞೆಯನ್ನು ನಿಭಾಯಿಸುವುದು ಪ್ರತಿಯೊಬ್ಬ ಅಹ್ಮದಿಯ ಕಡ್ಡಾಯ ಕರ್ತವ್ಯವಾಗಿದೆ. ಇಲ್ಲದಿದ್ದರೆ ಬೈಅತ್ ಅಪೂರ್ಣವಾಗುವುದು.

ಪವಿತ್ರ ಖುರ್‌ಆನನ್ನು ಗಾಢವಾಗಿ ಚಿಂತಿಸಿ ಓದುವುದರ ಕಡೆಗೆ ಗಮನ ಸೆಳೆಯುತ್ತಾ ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ: ನನ್ನೊಂದಿಗೆ ಸಂಬಂಧವಿರಿಸಿಕೊಂಡವರೊಡನೆ ನಾನು ಪದೇ ಪದೇ ಉಪದೇಶಿಸುವುದೇನೆಂದರೆ, ಅಲ್ಲಾಹನು ಈ ಜಮಾಅತನ್ನು ಸತ್ಯವನ್ನು ಪ್ರಕಟಪಡಿಸಲು ಸ್ಥಾಪಿಸಿದ್ದಾನೆ. ಕರ್ಮಪರವಾದ ಸತ್ಯತೆಯ ಮೂಲಕ ಇಸ್ಲಾಮಿನ ಶ್ರೇಷ್ಠತೆಯು ಲೋಕದಲ್ಲಿ ಪ್ರಕಟಗೊಳ್ಳಬೇಕೆಂದು ನಾನು ಬಯಸುತ್ತೇನೆ. ಅಲ್ಲಾಹನು ನನ್ನನ್ನು ಈ ಕೆಲಸಕ್ಕಾಗಿಯೇ ನಿಯೋಜಿಸಿದ್ದಾನೆ. ಆದ್ದರಿಂದ ನೀವು ಪವಿತ್ರ ಖುರ್‌ಆನನ್ನು ಹೆಚ್ಚಾಗಿ ಓದಿರಿ. ಆದರೆ ಕೇವಲ ಕಥೆಯೆಂದು ಭಾವಿಸಿಕೊಂಡಲ್ಲ. ಬದಲಾಗಿ ಒಂದು ತತ್ವಜ್ಞಾನವೆಂದು ಮನವರಿಕೆ ಮಾಡಿಕೊಂಡು ಪಠಿಸಬೇಕು.

ನಾವು ಲೌಕಿಕ ಕೆಲಸಗಳಲ್ಲಿ ಮುಳುಗಿಕೊಂಡರೆ, ನಮ್ಮ ಮಕ್ಕಳು ಮತ್ತು ನಮ್ಮ ಸಂತಾನಗಳು ಧರ್ಮದಿಂದ ದೂರಹೋಗುವರು. ಆದ್ದರಿಂದ ಇದು ಬಹಳವಾಗಿ ಚಿಂತಿಸಬೇಕಾದ ಮಾತಾಗಿದೆ. ನೆನಪಿಡಿರಿ, ಕೇವಲ ಬೈಅತ್ ಮಾಡುವುದರಿಂದ ಉದ್ದೇಶ ಈಡೇರುವುದಿಲ್ಲ. ನಾವು ಇಸ್ಲಾಮಿನ ಪಾಠಗಳ ಪ್ರಕಾರ ನಡೆಯುವವರಾಗುವಾಗಲೇ ಉದ್ದೇಶ ಸಿದ್ಧಿಯಾಗುವುದು. ಪವಿತ್ರ ಖುರ್‌ಆನನ್ನು ಓದುವ ಮತ್ತು ಮನವರಿಕೆ ಮಾಡುವ ತನಕ ಇದು ಸಾಧ್ಯವಲ್ಲ.

ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ: ಚಿರಕಾಲ ಜೀವಿತಕ್ಕಾಗಿ ಅಲ್ಲಾಹನು ಸೃಷ್ಟಿಸಿದ ಕಾರಂಜಿಯ ಸಮೀಪಕ್ಕೆ ನೀವು ತಲುಪಿದ್ದೀರಿ ಎಂಬುದೇ ಸತ್ಯವಾದ ಮಾತಾಗಿದೆ. ಆದರೆ ನೀರು ಕುಡಿಯುವ ಕೆಲಸ ಮಾತ್ರ ಈಗ ಬಾಕಿಯಿದೆ. ಆದ್ದರಿಂದ ನಿಮ್ಮ ಬಾಯಾರಿಕೆಯನ್ನು ನೀಗಿಸುವ ಸೌಭಾಗ್ಯವನ್ನು ನೀಡಲು ಅಲ್ಲಾಹನ ಕೃಪೆ ಮತ್ತು ಅನುಗ್ರಹದಿಂದ ಶಕ್ತಿ ಯಾಚಿಸಿರಿ. ಏಕೆಂದರೆ, ಅಲ್ಲಾಹನ ಸಹಾಯವಿಲ್ಲದೆ ಏನೂ ಸಾಧ್ಯವಾಗದು. ಯಾವನು ಈ ಚಿಲುಮೆಯಿಂದ ನೀರು ಕುಡಿಯುತ್ತಾನೋ ಆತನು ನಾಶ ಹೊಂದಲಾರನು ಎಂದು ನಾನು ಖಂಡಿತ ಬಲ್ಲೆನು. ಏಕೆಂದರೆ ಇದು ಜೀವದಾಯಕ ನೀರಾಗಿದೆ. ಈ ಚಿಲುಮೆಯಿಂದ ಯಥೇಷ್ಟವಾಗಿ ಕುಡಿಯಲು ಇರುವ ಮಾರ್ಗವೇನೆಂದರೆ, ಅಲ್ಲಾಹನು ನಿಮ್ಮೊಡನೆ ಈಡೇರಿಸಲು ಹೇಳಿದ ಎರಡು ಕರ್ತವ್ಯಗಳನ್ನು ಸರಿಯಾಗಿ ಈಡೇರಿಸಿರಿ. ಅವುಗಳಲ್ಲಿ ಒಂದು ದೇವನಿಗೆ ಸಲ್ಲಬೇಕಾದ ಕರ್ತವ್ಯಗಳಾಗಿವೆ. ಮತ್ತೊಂದು ದೇವನ ಸೃಷ್ಟಿಗಳಿಗೆ ಸಲ್ಲಬೇಕಾದ ಕರ್ತವ್ಯಗಳಾಗಿವೆ.

ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ: ಕೇವಲ ಬೈಅತ್ ಮಾಡುವುದು ಸಾಕಾಗಲಾರದು. ಅದರ ಪ್ರಕಾರ ನಡೆಯಬೇಕೆಂದು ಅಲ್ಲಾಹನು ಇಚ್ಛಿಸುತ್ತಾನೆ. ಯಾವನು ಸತ್ಕರ್ಮಗಳನ್ನು ಮಾಡುತ್ತಾನೋ ಆತನು ನಾಶಹೊಂದಲಾರನು. ಅವನು ಸದಾ ಅಲ್ಲಾಹನ ಕೃಪೆಯನ್ನು ಗಳಿಸುವನು. **ಲಾ ಇಲಾಹ ಇಲ್ಲಲ್ಲಾಹ್** ಅಲ್ಲಾಹನಲ್ಲದೆ ಆರಾಧನೆಗೆ ಅರ್ಹನು ಬೇರೆ ಯಾರೂ ಇಲ್ಲವೆಂಬ ಶಹಾದತ್ ಕಲಿಮದ ವಚನ ನಿಮ್ಮ ಬಾಹ್ಯ ಮತ್ತು ಅಂತರಂಗದ ಶಬ್ಧವಾಗುವಾಗಲೇ ಈ ಕರ್ಮಪರವಾದ ಸ್ಥಿತಿ ಉಂಟಾಗುವುದು. ಅಲ್ಲಾಹನ ಸಂಪ್ರೀತಿಯಲ್ಲದೇ ನಿಮಗೆ ಯಾವುದೇ

ಸಂಗತಿಯ ಆಸೆ ಇರಬಾರದು. ಅಲ್ಲಾಹನ ಆಜ್ಞೆಗಳನ್ನು ಪರಿಪೂರ್ಣವಾಗಿ ಅನುಸರಿಸುವಂತಾಗಬೇಕು. ಈಗ ನಮ್ಮಲ್ಲಿ ಪ್ರತಿಯೊಬ್ಬರು ಇದರ ಬಗ್ಗೆ ನೋಡಬಹುದಾಗಿದೆ. ನಾವು ಕಲಿಮ ಉಚ್ಚರಿಸುವಾಗ, ನಿಜವಾಗಿಯೂ ಸರ್ವೋನ್ನತನಾದ ಅಲ್ಲಾಹನ ಸಂಪ್ರೀತಿಯನ್ನು ಗಳಿಸುವುದೇ ನಮ್ಮ ಗುರಿಯಾಗಿದೆಯೇ? ನಿಜವಾಗಿಯೂ ನಾವು ಅವನ ಆಜ್ಞೆಗಳನ್ನು ಅನುಸರಿಸುತ್ತಿದ್ದೇವೆಯೇ? ನಮಾಝ್‌ಗಳ ಸಮಯದಲ್ಲಿ ಲೌಕಿಕವಾದ ಕೆಲಸಗಳನ್ನು ಬಿಟ್ಟುಕೊಂಡು ನಮಾಝ್‌ಗಳನ್ನು ನಿರ್ವಹಿಸುವುದರ ಕಡೆಗೆ ನಮ್ಮ ಗಮನವಿಲ್ಲವೆಂದಾದರೆ, ನಾವು ನಾಲಗೆಯಿಂದ ಕಲಿಮ ಉಚ್ಚರಿಸುತ್ತಿದ್ದೇವೆ, ಆದರೆ ಗುಪ್ತವಾದ ಶಿರ್ಕ್ ನಮ್ಮ ಹೃದಯದಲ್ಲಿದೆ ಎಂದಾಯಿತು. ನನ್ನ ವ್ಯಾಪಾರದಲ್ಲಿ ಮತ್ತು ನನ್ನ ಕೆಲಸದಲ್ಲಿ ಅಲ್ಲಾಹನ ಕೃಪೆಯಿಂದಲೇ ಅನುಗ್ರಹ ಉಂಟಾಗುತ್ತದೆ ಎಂಬ ದೃಢವಿಶ್ವಾಸದಲ್ಲಿ ಒಬ್ಬ ಸತ್ಯವಿಶ್ವಾಸಿ ಇರುತ್ತಾನೆ. ಹೀಗಿರುವಾಗ ಲೌಕಿಕವಾದ ಕೆಲಸಗಳು ಅಲ್ಲಾಹನ ಕರೆಗೆ ಎದುರಾಗಿ ನಿಲ್ಲಲು ಹೇಗೆ ಸಾಧ್ಯ? ಹೀಗಾಗುತ್ತಿದೆ ಎಂದಾದರೆ, ನಾವು ಕಲಿಮದ ತಿರುಳನ್ನು ಮನವರಿಕೆ ಮಾಡಿಯೇ ಇಲ್ಲವೆಂದಾಯಿತು. ನಾವು ನಾಲಗೆಯಿಂದ ಕಲಿಮ ವಚನವನ್ನು ಒಪ್ಪಿದ್ದೇವೆ. ಆದರೆ ನಮ್ಮ ಕೃತ್ಯಗಳು ನಮ್ಮ ಒಪ್ಪಿಗೆಗೆ ಜೊತೆ ನೀಡುತ್ತಿಲ್ಲ. ಅವಸ್ಥೆ ಈ ರೀತಿ ಇದೆ ಎಂದಾದರೆ, ಬೈಅತ್ತಿನ ಹಕ್ಕು ಈಡೇರಿಲ್ಲ.

ಸೃಷ್ಟಿಗಳಿಗೆ ಸಲ್ಲಬೇಕಾದ ಹಕ್ಕುಗಳನ್ನು ಈಡೇರಿಸಲು ಅಲ್ಲಾಹನು ಗಮನ ಸೆಳೆದಿರುವನು. ಅವುಗಳನ್ನು ಈಡೇರಿಸುವಾಗಲೇ ಒಬ್ಬನು ಯಥಾರ್ಥ ಸತ್ಯವಿಶ್ವಾಸಿಯಾಗುತ್ತಾನೆ ಮತ್ತು ಬೈಅತಿನ ಹಕ್ಕುಗಳನ್ನು ಈಡೇರಿಸುವವನಾಗುತ್ತಾನೆ. ಹಝ್ರತ್ ಮಸೀಹ್ ಮೌಊದ್[ಅ] ತನ್ನ ಜಮಾಅತನ್ನು ಉಪದೇಶಿಸುತ್ತಾ ಹೇಳುತ್ತಾರೆ: ನೀವು ಲೌಕಿಕರಂತೆ ಇರುವಿರಾದರೆ ಯಾವುದೇ ಪ್ರಯೋಜನವಿಲ್ಲ. ನನ್ನ ಕೈಯಲ್ಲಿ ತೌಬ ಮಾಡುವುದು ಒಂದು ಮರಣವನ್ನು ಆವಶ್ಯಪಡುತ್ತದೆ. ಇದರಿಂದ ನಿಮಗೆ ಹೊಸ ಜೀವಿತ ಮತ್ತು ಹೊಸ ಜನನ ಲಭಿಸುವುದು. ನಿಮಗೆ ಆಧ್ಯಾತ್ಮಿಕ ಜೀವಿತ ಲಭಿಸುವುದಿಲ್ಲವೆಂದಾದರೆ, ಅಂತಹ ಬೈಅತ್ತಿನಿಂದ ಯಾವುದೇ ಪ್ರಯೋಜನವಿಲ್ಲ. ನನ್ನನ್ನು ಬೈಅತ್ ಮಾಡುವುದರಿಂದ ಅಲ್ಲಾಹನು ಹೃದಯದ ಒಪ್ಪಿಗೆಯನ್ನು ಬಯಸುತ್ತಾನೆ. ಯಾವನು ಸತ್ಯಹೃದಯದಿಂದ ನನ್ನನ್ನು ಸ್ವೀಕಾರ ಮಾಡುತ್ತಾನೋ ಮತ್ತು ತನ್ನ ಪಾಪಗಳಿಂದ ಪಶ್ಚಾತ್ತಾಪ ಪಡುತ್ತಾನೋ ಆತನನ್ನು ಅಲ್ಲಾಹನು ಕ್ಷಮಿಸುತ್ತಾನೆ. ಆತನು ತಾಯಿಯ ಹೊಟ್ಟೆಯಿಂದ ಹೊರಟ ಮಗುವಿನಂತೆ ಆಗುತ್ತಾನೆ.

ನಮ್ಮ ಆರಾಧನೆಗಳು ಪ್ರಾಮಾಣಿಕವೂ ನಮ್ಮ ಕೃತ್ಯಗಳು ಅಲ್ಲಾಹನ ಸಂಪ್ರೀತಿಯನ್ನು ಗಳಿಸಲೂ ಆಗಿರಬೇಕು. ನಾಶದ ಬಹಳ ಭಯಾನಕ ಮೋಡಗಳು ಸುತ್ತುತ್ತಿವೆ ಎಂದು ಇಂದಿನ ಲೋಕದ ಸ್ಥಿತಿಗಳಿಂದ ಸ್ಪಷ್ಟವಾಗುತ್ತಿದೆ. ಉಂಟಾಗಲಿರುವ ನಾಶದಿಂದ ಲೋಕವೇ ಕೊನೆಗೊಳ್ಳುವುದು. ಆದ್ದರಿಂದ ಈಗ ದುಆಗಳನ್ನು ಮಾಡುವುದು ಅಹ್ಮದಿಯರ ಕೆಲಸವಾಗಿದೆ.

ಸಜ್ಜನರ ಸಲುವಾಗಿ ಅಲ್ಲಾಹನು ಇತರರನ್ನು ಕೂಡ ರಕ್ಷಿಸುತ್ತಾನೆ ಎಂದು ಹಝ್ರತ್ ಮಸೀಹ್ ಮೌಊದ್[ಅ] ಹೇಳಿರುವರು. ನಾವು ಬಹಳ ಅಪಾಯಕಾರಿ ಕಾಲಘಟ್ಟದಿಂದ ಸಾಗುತ್ತಿದ್ದೇವೆ. ಇಂತಹ ಸ್ಥಿತಿಯಲ್ಲಿ ಕೇವಲ ಅಲ್ಲಾಹನಿಗೆ ಮಾತ್ರ ನಮ್ಮನ್ನು ರಕ್ಷಿಸಲು ಸಾಧ್ಯ. ನೀವು ಸ್ವತಃ ಮತ್ತು ತಮ್ಮ ಮಕ್ಕಳನ್ನು ಕೂಡ ಅವನ ಮುಂದೆ ಬಾಗುವವರನ್ನಾಗಿ ಮಾಡಿರಿ. ಹಾಗಾದರೆ ಮಾತ್ರ ನಮ್ಮನ್ನು ಮತ್ತು ನಮ್ಮ ಮಕ್ಕಳನ್ನು ಕೂಡ ಸುರಕ್ಷಿತಗೊಳಿಸಬಹುದಾಗಿದೆ. ನಾವು **ಲಾ ಇಲಾಹ ಇಲ್ಲಲ್ಲಾಹ್** ಎಂಬ ಕಲಿಮ ವಚನದ ಹಕ್ಕನ್ನು ಈಡೇರಿಸುವವರಾದರೆ, ಅಲ್ಲಾಹನು ನಮ್ಮ ಉತ್ತಮ ಕೃತ್ಯಗಳ ಕಾರಣದಿಂದ ಲೋಕವನ್ನು ರಕ್ಷಿಸುವನು. ಲೋಕದ ಸ್ಥಿತಿ ಇನ್ನಷ್ಟು ಕೆಟ್ಟು ಹೋಗುವುದಕ್ಕೆ ಮುಂಚಿತವಾಗಿ ಬಹಳ ದುಆಗಳನ್ನು ಮಾಡಿರಿ. ಹಝ್ರತ್ ಮಸೀಹ್ ಮೌಊದ್[ಅ] ಹೇಳುತ್ತಾರೆ: ಆರಂಭದಲ್ಲಿ ಮಾಡುವುದೇ ಸತ್ಕರ್ಮವಾಗಿದೆ. ಅನಂತರ ಮಾಡಿದರೆ ಏನೂ ಪ್ರಯೋಜನವಿಲ್ಲ. ಹಡಗು ಮುಳುಗುತ್ತಿರುವಾಗ ಎಲ್ಲರೂ ಅಳುತ್ತಾರೆ. ಆದರೆ ಹಡಗು ಮುಳುಗುವಾಗ ಅಳುವುದು ಮತ್ತು ಕಿರುಚುವುದರಿಂದ ಏನೂ ಪ್ರಯೋಜನವಿಲ್ಲ. ಸುರಕ್ಷಿತವಾಗಿರುವ ಸ್ಥಿತಿಯಲ್ಲಿ ಮಾತ್ರ ಅದು ಪ್ರಯೋಜನಕರ. ಮಿಂಚು ಬೀಳಲಿದೆ ಎಂಬ ರೀತಿಯಲ್ಲಿ ಸಮಯಕ್ಕೆ ಮುಂಚಿತವಾಗಿಯೇ ಎಚ್ಚರದಿಂದ ಇರುವುದೇ ಅಲ್ಲಾಹನನ್ನು ಗಳಿಸಲಿಕ್ಕಿರುವ ಸೂತ್ರವಾಗಿದೆ. ಆದರೆ ಯಾವನು ಮಿಂಚನ್ನು ನೋಡಿ ಕಿರುಚುತ್ತಾನೋ ಆತನ ಮೇಲೆ ಮಿಂಚು ಖಂಡಿತ ಬೀಳುವುದು. ಏಕೆಂದರೆ ಆತನು ಮಿಂಚನ್ನು ಹೆದರುತ್ತಾನೆ. ದೇವನನ್ನು ಹೆದರುವುದಿಲ್ಲ.

ಇಂದು ಅಹ್ಮದಿಯರ ವಿಶ್ವಾಸ, ಅಲ್ಲಾಹನೊಂದಿಗೆ ಅವರಿಗೆ ಇರುವ ಸಂಬಂಧ ಮತ್ತು ಪ್ರಾರ್ಥನೆಗಳು ಮಾತ್ರ ಲೋಕವನ್ನು ನಾಶದಿಂದ ರಕ್ಷಿಸಬಹುದಾಗಿದೆ. ಲೋಕದ ಎಲ್ಲಾ ಜನರೊಂದಿಗೆ ಸಹಾನುಭೂತಿ ಇರಿಸಿಕೊಂಡು ದುಆ ಮಾಡಿರಿ. ಅಲ್ಲಾಹನಿಗೆ ಸಲ್ಲಬೇಕಾದ ಹಕ್ಕುಗಳು ಮತ್ತು ಅಲ್ಲಾಹನ ದಾಸರಿಗೆ ಸಲ್ಲಬೇಕಾದ ಹಕ್ಕುಗಳ ಕಡೆಗೆ ಗಮನಹರಿಸದಿದ್ದರೆ ಈ ಲೋಕವು ಬಂಜರಾಗಿ ಬದಲಾಗುವುದು. ಆದ್ದರಿಂದ ಪ್ರತಿಯೊಬ್ಬ ಅಹ್ಮದಿಯು ಈ ಚಿಂತೆಯೊಂದಿಗೆ ತನ್ನ ಕರ್ತವ್ಯಗಳನ್ನು ಈಡೇರಿಸಲು ಪ್ರಯತ್ನಿಸಬೇಕು. ಹಝ್ರತ್ ಮಸೀಹ್ ಮೌಊದ್[ಅ] ಹೇಳುತ್ತಾರೆ: ನೋಡಿರಿ, ನೀವು ಶ್ರಮಪಟ್ಟು ಕೃಷಿಭೂಮಿಯನ್ನು ತಯಾರು ಮಾಡಿದರೆ ಪ್ರಯೋಜನದ ಪ್ರತೀಕ್ಷೆ ಇರುತ್ತದೆ. ಇಂತಹ ನೆಮ್ಮದಿಯ ದಿನಗಳು ಪರಿಶ್ರಮಕ್ಕಾಗಿ ಆಗಿವೆ. ಈಗ ದೇವನನ್ನು ನೆನಸುವುದಾದರೆ, ಪ್ರಯೋಜನ ಲಭಿಸುವುದು. ಈಗ ದುಆಗಳನ್ನು ಮಾಡಿದರೆ ಕರುಣಾಳುವೂ ದಯಾಳುವೂ ಆದ ಅಲ್ಲಾಹನು ಕೃಪೆದೋರುವನು. ಈ ವಿಪತ್ತನ್ನು ಹೋಗಲಾಡಿಸಲು ಮತ್ತು ಈ ಶಿಕ್ಷೆಯಿಂದ ಸುರಕ್ಷಿತಗೊಳಿಸಲು ನಮಾಝ್‌ನಲ್ಲಿ ರುಕೂಅ್‌ನಲ್ಲೂ ಸಜ್‌ದದಲ್ಲೂ ದುಆ ಮಾಡಿರಿ. ದುಆ ಮಾಡುವವನು ಎಂದಿಗೂ ವಂಚಿತನಾಗಲಾರನು. ದುಆಗಳನ್ನು ಮಾಡುವವನು ನಾಶಹೊಂದಲಾರನು. ಹಾಗೇನಾದರೂ ಆದರೆ ಅಲ್ಲಾಹನನ್ನು ಗುರುತಿಸಲು ಸಾಧ್ಯವೇ ಅಲ್ಲ. ಆದ್ದರಿಂದ ಪರಿಪೂರ್ಣವಾಗಿ ನಿಮ್ಮಲ್ಲಿ ಸತ್ಯವಾದ ನಿಷ್ಠೆ ಉಂಟಾಗುವಂತೆ ಮಾಡಿರಿ. ಇಂದೂ ಅಂತಹದ್ದೇ ನಾಶದ ಲಕ್ಷಣಗಳು ಕಂಡುಬರುತ್ತಿವೆ. ಆದ್ದರಿಂದ ನಾವು ಅಲ್ಲಾಹನ ಮುಂದೆ ಬಾಗಬೇಕು. ಏಕೆಂದರೆ, ಲೋಕವನ್ನು ರಕ್ಷಿಸಲು ಇರುವ ಮಾರ್ಗ ಇದೊಂದೇ ಆಗಿದೆ.

ಉನ್ನತ ಸ್ವಭಾವಗುಣಗಳನ್ನು ತೋರಿಸಬೇಕು ಎಂಬುದು ಕೂಡ ಅಲ್ಲಾಹನ ಆದೇಶಗಳಲ್ಲಿ ಒಂದು ಆದೇಶವಾಗಿದೆ. ಹಝ್ರತ್ ಮಸೀಹ್ ಮೌಊದ್[ಅ] ಹೇಳುತ್ತಾರೆ: ನಾಲಗೆಯಿಂದ ಹೊರಡುವ ಕೊಳಕು ಮಾತುಗಳಿಂದ ಶತ್ರುತ್ವ ಉಂಟಾಗುತ್ತದೆ. ಆದುದರಿಂದ ನಾಲಗೆಯನ್ನು ನಿಯಂತ್ರಣದಲ್ಲಿಡುವುದು ಕೂಡ ಅವಶ್ಯವಾಗಿದೆ. ಇಸ್ಲಾಂ ಒಂದೆಡೆ ನೈತಿಕಗುಣಗಳ ಮಿತಿಯಲ್ಲಿರಲು

ಕಲಿಸುತ್ತದೆ. ಮತ್ತೊಂದೆಡೆ ಕಾನೂನಿನ ಮಿತಿಯಲ್ಲಿದ್ದುಕೊಂಡು ಧಾರ್ಮಿಕ ಅಭಿಮಾನವನ್ನು ತೋರಿಸಲು ಕೂಡ ಹೇಳುತ್ತದೆ.

ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ: ಅಹ್ಮದಿಯರಲ್ಲಿ ಇರಬೇಕಾದ ಮತ್ತೊಂದು ಗುಣವೇನೆಂದರೆ, ಪರಸ್ಪರ ಪ್ರೀತಿ ಮತ್ತು ಸಹೋದರತೆಯನ್ನು ಉಂಟುಮಾಡಿರಿ. ಪರಸ್ಪರ ನೈಜವಾದ ಸಹಾನುಭೂತಿ ತೋರಿಸದಿದ್ದರೆ, ನಮ್ಮ ಜಮಾಅತಿಗೆ ತಾಜಾತನ ಬರದು. ಅಹ್ಮದಿಯಾ ಜಮಾಅತಿನಲ್ಲಿ ಸೇರಿಕೊಂಡು ನಾವು ಒಬ್ಬ ಆಧ್ಯಾತ್ಮಿಕ ತಂದೆಯ ಮಕ್ಕಳಾಗಿ ಬಿಟ್ಟಿದ್ದೇವೆ ಎಂಬುದರ ಕಡೆಗೆ ಹಝ್ರತ್ ಮಸೀಹ್ ಮೌಊದ್(ಅ) ನಮ್ಮ ಗಮನಸೆಳೆದಿರುವರು. ಯಾರಿಗೂ ಮತ್ತೊಬ್ಬರ ಮೇಲೆ ಯಾವುದೇ ಶ್ರೇಷ್ಠತೆಯಿಲ್ಲ.

ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ: ನಮ್ಮ ಜಮಾಅತನ್ನು ಅಲ್ಲಾಹನು ಒಂದು ಮಾದರಿಯನ್ನಾಗಿ ಮಾಡಲು ಬಯಸುತ್ತಾನೆ. ಏನು, ಯಾವುದೇ ಆಳವಾದ ಕೃತ್ಯಗಳಿಲ್ಲದೇ ಕೇವಲ ಬಾಹ್ಯವಾದ ಮಾತುಗಳಿಂದ ಮಾತ್ರ ಮಾದರಿಯಾಗಲು ಸಾಧ್ಯವೇ? ಅದಕ್ಕಾಗಿ ಬಹಳ ಕಠಿಣ ಪ್ರಯತ್ನ ಮಾಡಬೇಕಾಗುತ್ತದೆ. ತಮ್ಮ ಆರಾಧನೆಗಳ ಮಟ್ಟವನ್ನು ಉನ್ನತಗೊಳಿಸುತ್ತಾ, ತಮ್ಮ ನೈತಿಕ ಸ್ವಭಾವಗುಣಗಳ ಸ್ಥಿತಿಗಳನ್ನು ಸರಿಪಡಿಸುತ್ತಾ, ಪರಸ್ಪರ ಪ್ರೀತಿ ಮತ್ತು ಸಹೋದರತೆಯ ಸಂಬಂಧದ ಉನ್ನತ ಮಟ್ಟವನ್ನು ನೆಲೆನಿಲ್ಲಿಸುತ್ತಾ ನಾವು ಮಾದರಿಯಾಗುತ್ತಿದ್ದೇವೆಯೇ ಎಂದು ನಾವು ನೋಡಬೇಕಾಗುವುದು.

ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ: ಅಲ್ಲಾಹನು ಮುತ್ತಖಿಯನ್ನು ಪ್ರೀತಿಸುತ್ತಾನೆ. ಅಲ್ಲಾಹನ ವೈಭವವನ್ನು ನೆನಪಿಸಿಕೊಂಡು ತಮ್ಮ ಹೃದಯದಲ್ಲಿ ಅಲ್ಲಾಹನ ಭಯ ಇರಿಸಿಕೊಳ್ಳಬೇಕು. ನೆನಪಿಡಿರಿ, ಎಲ್ಲರೂ ಅಲ್ಲಾಹನ ದಾಸರಾಗಿದ್ದೇವೆ. ಯಾರೊಂದಿಗೂ ದೌರ್ಜನ್ಯ ಮಾಡಬೇಡಿರಿ, ಯಾರನ್ನೂ ಕೀಳಾಗಿ ಭಾವಿಸಬೇಡಿರಿ. ಒಬ್ಬ ವ್ಯಕ್ತಿ ಕೊಳಕನಾದರೆ, ಆತನು ಎಲ್ಲರನ್ನೂ ಕೊಳಕುಗೊಳಿಸುತ್ತಾನೆ. ಉನ್ನತ ಮಟ್ಟದ ದೇವಭಕ್ತಿಯಿರುವಾಗಲೇ ಉನ್ನತ ಮೌಲ್ಯಗಳು ಮತ್ತು ಉನ್ನತ ನೈತಿಕ ಸ್ವಭಾವಗುಣಗಳು ಉಂಟಾಗುತ್ತವೆ. ನಮ್ಮ ಜಮಾಅತಿನ ಸಂಬಂಧವು ತಾನು ಅಲ್ಲಾಹನಿಂದ ಕಳುಹಿಸಿದ ವ್ಯಕ್ತಿಯಾಗಿದ್ದೇನೆ ಎಂದು ವಾದಿಸುವ ಒಬ್ಬರ ಜೊತೆಯಾಗಿದೆ. ನಮ್ಮಲ್ಲಿ ತಖ್ವ ಇದೆಯೇ ಇಲ್ಲವೇ ಎಂಬ ಚಿಂತೆ ನಮ್ಮ ಜಮಾಅತಿನವರಿಗೆ ಇತರ ಎಲ್ಲ ಲೌಕಿಕವಾದ ಚಿಂತೆಗಳಿಗಿಂತ ಹೆಚ್ಚಾಗಿರಬೇಕು. ಆದ್ದರಿಂದ ನಾವು ನಮ್ಮ ಬೈಅತ್ತಿನ ಹಕ್ಕುಗಳನ್ನು ಈಡೇರಿಸಬೇಕಾದರೆ, ಅಲ್ಲಾಹನು ಮಾಡಿದ ಔದಾರ್ಯಗಳಿಗೆ ಕೃತಜ್ಞತೆ ಅರ್ಪಿಸಬೇಕಾದರೆ, ನಾವು ನಮ್ಮ ಸ್ಥಿತಿಗತಿಗಳ ಬಗ್ಗೆ ಸದಾ ಅವಲೋಕನ ನಡೆಸಬೇಕಾದ ಆವಶ್ಯಕತೆಯಿದೆ.

ಹಝ್ರತ್ ಮಸೀಹ್ ಮೌಊದ್(ಅ)ರ ಅಭಿಲಾಷೆ ಪ್ರಕಾರ ತಮ್ಮ ಜೀವಿತಗಳನ್ನು ಮಾಡುವವರಾಗಲು, ಧರ್ಮಕ್ಕೆ ಲೌಕಿಕತೆಗಿಂತ ಆದ್ಯತೆ ನೀಡುವವರಾಗಲು ಅಲ್ಲಾಹನು ನಮಗೆ ಸೌಭಾಗ್ಯ ನೀಡಲಿ. ಅಲ್ಲಾಹನ ಭಯ ನಮ್ಮೊಳಗೆ ಉಂಟಾಗಲಿ, ನಾವು ಸತ್ಯವಾಗಿಯೂ **"ಅಶ್‌ಹದು ಅಲ್ಲಾಇಲಾಹ ಇಲ್ಲಲ್ಲಾಹು"**ವಿನ ಹಕ್ಕನ್ನು ಈಡೇರಿಸುವವರಾಗಲಿ, ಹಝ್ರತ್ ಪೈಗಂಬರ್(ಸ)ರಿಗೆ ಅಲ್ಲಾಹನು ಸುವಾರ್ತೆ ನೀಡಿದ ಕೊನೆಗಾಲದ ಜಮಾಅತಿನವರಲ್ಲಿ ಸೇರಿದವರಾಗಲು ಅಲ್ಲಾಹನು ನಮಗೆ ಸೌಭಾಗ್ಯ ನೀಡಲಿ – ಆಮೀನ್.

*****

اَلْحَمْدُلِلّٰهِ نَحْمَدُهٗ وَنَسْتَعِيْنُهٗ وَنَسْتَغْفِرُهٗ وَنُؤْمِنُ بِهٖ وَنَتَوَكَّلُ عَلَيْهِ وَنَعُوْذُ بِاللّٰهِ
مِنْ شُرُوْرِ اَنْفُسِنَا وَمِنْ سَيِّئَاتِ اَعْمَالِنَا مَنْ يَّهْدِهِ اللّٰهُ فَلَا مُضِلَّ لَهٗ وَمَنْ يُّضْلِلْهُ
فَلَاهَادِيَ لَهٗ ۔ وَنَشْهَدُ اَنْ لَّآ اِلٰهَ اِلَّا اللّٰهُ وَنَشْهَدُاَنَّ مُحَمَّدًا عَبْدُهٗ وَرَسُوْلُهٗ
عِبَادَ اللّٰهِ رَحِمَكُمُ اللّٰهُ اِنَّ اللّٰهَ يَأْمُرُ بِالْعَدْلِ وَالْاِحْسَانِ وَاِيْتَاءِ ذِي الْقُرْبٰى
وَيَنْهٰى عَنِ الْفَحْشَآءِ وَالْمُنْكَرِ وَالْبَغْيِ يَعِظُكُمْ لَعَلَّكُمْ تَذَكَّرُوْنَ ۝ اُذْكُرُوا اللّٰهَ
يَذْكُرْكُمْ وَادْعُوْهُ يَسْتَجِبْ لَكُمْ وَلَذِكْرُ اللّٰهِ اَكْبَرُ.

***Friday Sermon delivered by Hadrath Khaleefatul Masih Al Khamis(atba)***

*At, **'Masjid Baitur Rahman'** Silver Spring, Maryland, USA, on 14-10-2022*

**Summarized by** *Majlis Ansarullah Bharat*

***Kannada Translation**:* Moulavi Inamullah for Kannada Desk, Qadian

***Reviewed by**:* M.P Ibrahim |***Layout**:* U Basheer Ahmad

***Published By**:* Kannada Isha'at Team for Nazarath Nashr-O-Isha'ath, Qadian

***Email**: khutuba.kannada@gmail.com*

**You can find all the Sermons archived at**: www.alislam.org/friday-sermon